**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 591/2021 |
| ಸಿ.ಡಬ್ಲೂ | 6 |
| ಪಿ.ಡಬ್ಲೂ | 7 |

| | | |
|---|---|---|
| ಹೆಸರು | :- | ಕಲ್ಲವ್ವ ಕುರಿ |
| ತಂದೆ/ಗಂಡನ ಹೆಸರು | :- | ವಿಠ್ಠಲ |
| ವಯಸ್ಸು | :- | 36 ವರ್ಷ |
| ಉದ್ಯೋಗ | :- | ಒಕ್ಕಲುತನ |
| ವಾಸಸ್ಥಳ | :- | ದಾದನಟ್ಟಿ |

ಸಾಕ್ಷಿಯನ್ನು ದಿಃ23.01.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

1.ಚಾಸಾ-1 ರವರ ಪರಿಚಯ ಇದೆ, ಆರೋಪಿ-2 ನನ್ನ ಗಂಡ. ಆರೋಪಿತರು ಮತ್ತು ಚಾಸಾ-4 ನಡುವೆ ಬಾಯಿ ಮಾತಿನ ಜಗಳ ಆಗಿತ್ತು. ಆರೋಪಿತರು ಚಾಸಾ-4 ರವರಿಗೆ ಹೊಡೆ-ಬಡೆ ಮಾಡಿಲ್ಲ, ಮಾನಸಿಕವಾಗಿ ದೈಹಿಕವಾಗಿ ಕಿರುಕುಳ ನೀಡಿಲ್ಲ, ಅವಾಚ್ಯವಾಗಿ ಬೈದಿಲ್ಲ, ಚಾಸಾ-1 ಮತ್ತು ಚಾಸಾ-4 ರವರಿಗೆ ಪ್ರಾಣ ಬೆದರಿಕೆ ಹಾಕಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**ಪಾಟೀ ಸವಾಲು :ಸ.ಸ.ಅ ರವರಿಂದ**

1. ದಿಃ16.07.2021 ರಂದು ಸಂಜೆ 06-30 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ಚಾಸಾ-4 ರವರಿಗೆ ಆರೋಪಿ-1 ಮತ್ತು 2 ರವರು ಕೈಯಲ್ಲಿ ತಲಾ ಒಂದೊಂದು ಕೊಡಲಿ ತೆಗೆದುಕೊಂಡು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆಗ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಆರೋಪಿ-1 ರವರು ಆಕೆಯ ನೆತ್ತಿಗೆ ಕೊಡಲಿಯಿಂದ ಹೊಡೆದ ಎಂದರೆ ಸರಿಯಲ್ಲ. ಆಗ 2 ನೇ ಆರೋಪಿತ ಅವಾಚ್ಯ ಶಬ್ದಗಳಿಂದ ಬೈದು ಕೊಡಲಿಯಿಂದ ಚಾಸಾ-4 ರವರ ತಲೆಯ ಮುಂಭಾಗಕ್ಕೆ ಹೊಡೆದನು ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಎಡಗೈ ಅಡ್ಡತಂದಿದ್ದರಿಂದ ಅವರ ಕೈಗೆ ಒಳಪೆಟ್ಟು ಆಯಿತು ಎಂದರೆ ಸರಿಯಲ್ಲ. ಆಗ ಉಳಿದ ಇಬ್ಬರು ಆ ರೀತಿ ಹೊಡೆಯುದಕ್ಕೆ ಕುಮ್ಮಕ್ಕು ನೀಡಿದರು ಎಂದರೆ ಸರಿಯಲ್ಲ. 4 ಜನ ಆರೋಪಿತರು ಕೊಡಲಿ ತೋರಿಸಿ ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆಗ ಚಾಸಾ-4 ರವರು ಜೋರಾಗಿ ಶಬ್ದ ಮಾಡಿದ್ದು, ನೀವು ಮತ್ತು ಚಾಸಾ-7 ರವರು ಆಕೆಯನ್ನು ಬಿಡಿಸಿದಿರಿ ಎಂದರೆ ಸರಿಯಲ್ಲ. ಚಾಸಾ-1 ರವರು ಅವರ

ದ್ವಿಚಕ್ರ ವಾಹನದ ಮೇಲೆ ಚಾಸಾ-4 ಮತ್ತು ಚಾಸಾ-1 ರವರನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ಘಟನೆಗೆ ಸಂಬಂಧಿಸಿದಂತೆ ನೀವು ದಿಃ18.07.2021 ರಂದು ಪೊಲೀಸರ ಸಮಕ್ಷಮ "ದಿಃ16.07.2021 ರಂದು ……………….. ಕೇಳಿ ಗೊತ್ತಾಗಿದ್ದು ಅದೆ ಎಂದು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ಮೇಲೆ ಹೇಳಿದಂತೆ ಘಟನೆ ಆಗಿದ್ದರೂ ಸಹ ಮತ್ತು ಹೇಳಿಕೆ ನೀಡಿದ್ದರೂ ಸಹ ಆರೋಪಿ-2 ನಿಮ್ಮ ಗಂಡ ಮತ್ತು ಉಳಿದ ಆರೋಪಿತರು ನಿಮ್ಮ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಶ್ರೀ.ವಾಯ್.ಎಮ್.ಎಚ್ ವಕೀಲರಿಂದ ಆರೋಪಿಯವರ ಪರವಾಗಿ**

1. ಇಲ್ಲ.

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ